ತರೀಕೆರೆ ವಿಜ್ಞಾನ ಕೈಗಾರಿಕೆಯ ದಿನಗೂಲಿ ನೌಕರರ ಬೇಡಿಕೆಗಳು

೯೪೭. ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ತರೀಕೆರೆ ವಿಜ್ಞಾನ ಕೈಗಾರಿಕೆಯಲ್ಲಿ ನಿರಂತರವಾಗಿ ೬-೭ ವರ್ಷಗಳಿಂದ ದಿನಗೂಲಿ ಕಾರ್ಮಿಕರಾಗಿ ದುಡಿಯುತ್ತಿದ್ದವರು ಸಂಸ್ಥೆಯ ಧೋರಣೆಯಿಂದಾಗಿ ಇಂದು ಬೀದಿಪಾಲಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸರ್ಕಾರದವರು ಈ ದಿಶೆಯಲ್ಲಿ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಮಂತ್ರಿಗಳು).—

ಅ) ಹೌದು. ಆದರೆ ಅವರಿಗೆ ಕೆಲಸವು ಪೂರ್ಣವಾಗಿ ಇಲ್ಲದೆ ಹೋಗಿಲ್ಲ ಕೆಲಸವಿದ್ದಾಗ ಕೊಡಲಾಗುತ್ತದೆ.

ಆ) ಉಡಳಿತವರ್ಗದವರು ತರೀಕೆರೆಯ ವಿಜ್ಞಾನ ಕೈಗಾರಿಕೆಯಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ಕೆಲಸಗಾರರಿಗೆ ಕೆಲಸ ಕಾಲಿ ಇದ್ದಾಗ ಕೆಲಸವನ್ನು ಕೊಡಲು ಒಪ್ಪಿದ್ದಾರೆ ಮತ್ತು ಇತರೆ ಕೆಲಸಗಾರರ ಬೇಡಿಕೆಗಳನ್ನು ಪೂರೈಸಲು ಎಲ್ಲಾ ರೀತ್ಯನವನ್ನೂ ಮಾಡಲಾಗುತ್ತದೆ.

ವಿರಾಜ ಪೇಟೆ ಕ್ಷೇತ್ರದಲ್ಲಿ ಬಸ್ ಸೌಕರ್ಯ ಒದಗಿಸುವುದು

೯೧೬. ಶ್ರೀಮತಿ ಸುಮಾ ವಸಂತ್ (ವಿರಾಜ ಪೇಟೆ).—ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ವಿರಾಜಪೇಟೆ ಕ್ಷೇತ್ರದಲ್ಲಿ ಕೆಲವು ಕಡೆ ಸೌಲಭ್ಯ ಒದಗಿಸುವುದರ ಬಗ್ಗೆ ಸ್ಥಳೀಯ ಶಾಸಕರು ವಿನಂತಿ ಮಾಡಿಕೊಂಡಿದ್ದು, ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈವರೆಗೆ ಬಸ್ ಸೌಲಭ್ಯ ಒದಗಿಸದೇ ಇರುವುದಕ್ಕೆ ಕಾರಣವೇನು ?

ಇ) ಕೋರಿರುವ ಬಸ್ ಸೌಕರ್ಯವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಎಂ.ಪಿ. ಪ್ರಕಾಶ್ (ಸಾರಿಗೆ ರಾಜ್ಯ ಮಂತ್ರಿಗಳು).—

ಅ) ಬಂದಿವೆ.

ಆ) ಈ ಕೋರಿಕೆಯನ್ನು ಪರಿಶೀಲಿಸಲಾಗುತ್ತಿದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ವಿವಿಧ ಮಾರ್ಗಗಳ ಅಧ್ಯಯನ ನಡೆಸಿ, ಮುಳಿಗಾಲ ಕಳೆದ ನಂತರ ಆರ್ಥಿಕ ದೃಷ್ಟಿಯಿಟ್ಟುಕೊಂಡು ಅವಶ್ಯಕತೆಗನುಗುಣವಾಗಿ ಹೆಚ್ಚಿನ ಮಾರ್ಗಗಳನ್ನು ಪ್ರಾರಂಭಿಸಲು ನಿರ್ಧರಿಸುವರು.

ಅರಕಲಗೂಡು ತಾಲ್ಲೂಕ್ ರಾಮನಾಥ್‌ಪುರದಲ್ಲಿ ರೇಷ್ಮೆ ಮಾರುಕಟ್ಟೆಯ ವಿಷಯ

೧೦೧೦. ಶ್ರೀ ಕೆ.ಬಿ. ಮಲ್ಲಪ್ಪ (ಅರಕಲಗೂಡು).—ಮಾನ್ಯ ರೇಷ್ಮೆ ವ್ಯವಸಾಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

ಅ) ಅರಕಲಗೂಡು ತಾಲ್ಲೂಕಿನಲ್ಲಿ ಎಷ್ಟು ಎಕರೆಯಲ್ಲಿ ರೇಷ್ಮೆ ಬೆಳೆಯುತ್ತಿದ್ದಾರೆ ?

ಆ) ಬೆಳೆದ ರೇಷ್ಮೆಯನ್ನು ಮಾಡಲು ರಾಮನಗರ ಮಂತ್ತು ಚನ್ನಪಟ್ಟಣಕ್ಕೆ ರೈತರು ತೆಗೆದು ಕೊಂಡು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ, ರಾಮನಗರವು ಬಹಳ ದೂರವಾದ್ದರಿಂದ ಸ್ಥಳದಲ್ಲಿಯೇ ಬೆಳೆದ ರೇಷ್ಮೆಯನ್ನು ಮಾರಲು ಸರ್ಕಾರದವರು ಏನಾದರೂ ವ್ಯವಸ್ಥೆ ಮಾಡುವರೇ ?

ಶ್ರೀ ವೈ.ಕೆ. ರಾಮಯ್ಯ (ರೇಷ್ಮೆ ಖಾತೆಯ ರಾಜ್ಯ ಸಚಿವರು).—

ಅ) ೧೨೪೩.೩೦ ಎಕರೆಗಳು.

ಆ) ಹೌದು.

ಇ) ಹಾಸನದಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿ ಯೋಜನೆಯಲ್ಲಿ 2ನೇ ವರ್ಗದ ಮಾರುಕಟ್ಟೆಯನ್ನು ಸ್ಥಾಪಿಸಲಾಗಿದ್ದು ಅದರ ವಹಿವಾಟು ಈಗ ನಡೆಯುತ್ತಿದೆ. ಸದರಿ ಮಾರುಕಟ್ಟೆ ಸ್ಥಾಪನೆಯಾಗುವ ಮೊದಲು ರೈತರು ಅನುಕೂಲಕ್ಕಾಗಿ ಅರಕಲಗೂಡು ತಾಲ್ಲೂಕಿನ ರಾಮನಾಥಪುರದಲ್ಲಿ ರೇಷ್ಮೆ ಗೂಡನ್ನು ಮಾರಾಟ ಮಾಡಲು ಒಂದು ವ್ಯಾಪಾರ ಕೇಂದ್ರವನ್ನು ಸ್ಥಾಪಿಸಿದೆ. ಈಗಲೂ ಇದು ಕಾರ್ಯಗತದಲ್ಲಿದೆ.

ಬಿಳಗಿರಿಯಂಲ್ಲಿ ಎಕ್ಸ್‌ಪ್ರೆಸ್ ಬಸ್‌ಗಳ ಅವಕಾಶ ಮಾಡಿಕೊಡುವುದು

೧೦೪೩. ಶ್ರೀ ಬಾಬುರೆಡ್ಡಿ ವೆಂ. ತಂಗಾಳ್ (ಬೀಳಗಿ).—ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಬೀಳಗಿ ತಾಲ್ಲೂಕ್ ಕೇಂದ್ರದಿಂದ ಬಿಜಾಪುರ ಹಾಗೂ ಬಾಗಲಕೋಟೆಗೆ ದಿನನಿತ್ಯ ನೂರಾರು ಜನರು ಪ್ರಯಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಬೀಳಗಿ ಊರಿನೊಳಕ್ಕೆ ಬಾರದೆ ಹೊಲ್ಲಾಪುರ–ಬಾದಾಮಿ, ಮುದ್ದೇಬಿಹಾಳ–ಹುಬ್ಬಳ್ಳಿ, ವಿಜಾಪುರ–ಹುಬ್ಬಳ್ಳಿ, ಬಿಜಾಪುರ–ಕಾರವಾರ, ಎಕ್ಸ್‌ಪ್ರೆಸ್ ಬಸ್‌ಗಳು ಊರಿನ ಹೊರ ರಸ್ತೆಯಲ್ಲಿ ಹೋಗುತ್ತಿರುವುದು ಸರ್ಕಾರದವರು ಗಮನಿಸಿದ್ದಾರೆಯೇ ?

ಇ) ಮೇಲ್ಕಾಣಿಸಿದ ಬಸ್‌ಗಳು ನಗರದ ನಿಲ್ದಾಣಕ್ಕೆ ಬಂದು ಹೋಗಬೇಕೆಂದು ಅಲ್ಲಿಯ ಜನರು ಸಂಬಂಧಿಸಿದ ಅಧಿಕಾರಿಗಳಿಗೆ ಒತ್ತಾಯ ಪಡಿಸಿದ್ದರೂ ಊರೊಳಗೆ ಬಸ್‌ಗಳು ಬಾರದಿರಲು ಕಾರಣ ವೇನು ?

ಈ) ಈ ನಾಲ್ಕು ಎಕ್ಸ್‌ಪ್ರೆಸ್ ಬಸ್‌ಗಳು ಬೀಳಗಿಗೆ ಬಂದು ಹೋಗುವಂತೆ ಮಾಡಲಾಗುವುದೇ?

ಶ್ರೀ ಎಂ.ಪಿ. ಪ್ರಕಾಶ್ (ರಾಜ್ಯ ಸಾರಿಗೆ ರಾಜ್ಯ ಮಂತ್ರಿಗಳು).—

ಅ) ಬಂದಿದೆ.

ಆ) ಗಮನಕ್ಕೆ ಬಂದಿದೆ.

ಇ) ಈ ಬಸ್ಸುಗಳು ಅತಿ ಕಮ್ಮಿ ನಿಲುಗಡೆ ನಿಗದಿಪಡಿಸಿದ ವೇಗಧೂತ ಬಸ್ಸುಗಳಾಗಿದ್ದು ಬೀಳಗಿ ಯಲ್ಲಿ ಈ ಬಸ್ಸುಗಳಿಗೆ ನಿಲುಗಡೆಯನ್ನು ಕಲ್ಪಿಸಿಲ್ಲ.

ಈ) ಇಲ್ಲ.

ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಲಿಯ ನಿಬಂಧನೆಗಳು

೧೦೪೪. ಶ್ರೀ ಕೆ. ಕೆಂಪೀರೇ ಗೌಡ (ಚಾಮರಾಜ).—ಮಾನ್ಯ ನಗರಾಭಿವೃದ್ಧಿ ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಮೈಸೂರಿನಲ್ಲಿರುವ ಆಲನಹಳ್ಳಿ ಮತ್ತು ಕೆಸರೆ ಬಡಾವಣೆಗಳಲ್ಲಿ ನಿರ್ಮಿಸಿರುವ ನಿವೇಶನಗಳಿಗೆ ಅರ್ಜಿ ಹಾಕಲು ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯು ವಿಧಿಸಿರುವ ನಿಬಂಧನೆಗಳೇನು ?

ಆ) ಈ ನಿಬಂಧನೆಯನ್ನು ವಿಧಿಸುವುದಕ್ಕೆ ವಿಶ್ವಸ್ಥ ಮಂಡಳಿಗೆ ಅಧಿಕಾರವಿದೆಯೆ ?

ಇ) ಸದರಿ ನಿಬಂಧನೆಗಳನ್ನು ಪೂರೈಸುವುದಕ್ಕೆ ಅರ್ಜಿದಾರರುಗಳು ಅನುಭವಿಸುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿಯು ಅನುಮೋದನೆಯನ್ನು ಪಡೆಯದೆ ಆಲನಹಳ್ಳಿ ಬಡಾವಣೆಯಲ್ಲಿ ಮನೆಗಳನ್ನು ಕಟ್ಟಲು ಟೆಂಡರು ಕರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಉ) ಹಾಗಿದ್ದಲ್ಲಿ ಸಾರ್ವಜನಿಕರಿಗಾಗಿರುವ ತೊಂದರೆ ಮತ್ತು ಕಾನೂನು ಬಾಹಿರ ಕ್ರಮಗಳನ್ನು ತಪ್ಪಿಸಲು ತೆಗೆದುಕೊಂಡಿರುವ ಕ್ರಮಗಳೇನು ?